ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

E-Mail: prydirector.edu.sgkar@nic.in

ಸಂಖ್ಯೆ : ಸಿ7(8)ಆರ್.ಟಿ.ಇ/ಶು.ಮ.ಪಾ/2018-19[280078]　　　　ದಿನಾಂಕ : 29ನೇ ಜನವರಿ 2019

## ಜ್ಞಾಪನ

ವಿಷಯ: 2016-17 ಮತ್ತು 2017-18ನೇ ಸಾಲಿನಲ್ಲಿ ಆರ್.ಟಿ.ಇ. ಅಡಿಯಲ್ಲಿ ದಾಖಲಾದ ಮಕ್ಕಳ ಶುಲ್ಕ ಮರುಪಾವತಿಗಾಗಿ ಬಿಡುಗಡೆಯಾದ ಅನುದಾನವನ್ನು ತುರ್ತಾಗಿ ಬಳಕೆ ಮಾಡುವ ಕುರಿತು.

ಉಲ್ಲೇಖ: ಮಾನ್ಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿ: 18.1.2019 ನಡೆದ ಮಾಸಿಕ ಪ್ರಗತಿ ಪರಿಶೀಲನಾ ಸಭೆ

- - - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2016-17 ಮತ್ತು 2017-18ನೇ ಸಾಲಿನಲ್ಲಿ ಆರ್.ಟಿ.ಇ. ಅಡಿಯಲ್ಲಿ ದಾಖಲಾದ ಮಕ್ಕಳ ಶುಲ್ಕ ಮರುಪಾವತಿಗಾಗಿ ಅನುದಾನವನ್ನು ದಿನಾಂಕ: 29.5.2018 ಮತ್ತು 28.12.2018 ರಂದು ಅವಶ್ಯವಿರುವ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ. ಅನುದಾನ ಬಿಡುಗಡೆ ಆದೇಶಗಳಲ್ಲಿ 2016-17 ಮತ್ತು 2017-18ನೇ ಸಾಲಿನಲ್ಲಿ ದಾಖಲಾದ ಮಕ್ಕಳಿಗೆ ಅನುದಾವನ್ನು ಬಳಸಿಕೊಂಡು ಉಳಿಕೆ ಮೊತ್ತವನ್ನು 2018-19ನೇ ಸಾಲಿನಲ್ಲಿ ದಾಖಲಾದ ಮಕ್ಕಳಿಗೆ ಬಳಸಿಕೊಳ್ಳಲು ಸೂಚಿಸಲಾಗಿದೆ.

ಬಿಡುಗಡೆ ಮಾಡಿದ ಅನುದಾನದಲ್ಲಿ ಶೇಕಡ 75 ರಷ್ಟು ಮೊತ್ತವನ್ನು ಬಳಸದಿದ್ದಲ್ಲಿ ಮುಂದಿನ ಕಂತಿನ ಅನುದಾನ ಬಿಡುಗಡೆ ಮಾಡುವುದಿಲ್ಲವೆಂದು ಸರ್ಕಾರದ ಆದೇಶವಿರುತ್ತದೆ. ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ] ಇವರುಗಳು ತಮ್ಮ ತಮ್ಮ ಹಂತದಲ್ಲಿನ ಆರ್.ಟಿ.ಇ. ಖಾತೆಯಲ್ಲಿನ ಮೊತ್ತವನ್ನು ಆನ್‌ಲೈನ್ ಮುಖೇನ ಕೆ-2ರಲ್ಲಿ ಕೂಡಲೇ ಶುಲ್ಕ ಮರುಪಾವತಿಗಾಗಿ ಬಳಸಿಕೊಳ್ಳುವುದು.

ಈವರೆಗೆ ಶೇಕಡ 75ರಷ್ಟು ಅನುದಾನ ಬಳಕೆಯಾಗದಿರುವ ಕುರಿತು ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಬೇಸರ ವ್ಯಕ್ತಪಡಿಸುತ್ತಾ **"ಬಾಕಿ ಇರುವ ಬಿಲ್ಲುಗಳನ್ನು ಈ ಕೂಡಲೇ ಹಿಂಬಾಲಿಸಿ ವೆಚ್ಚದಲ್ಲಿ ಪ್ರಗತಿಯನ್ನು ಸಾಧಿಸುವಂತೆ ಸೂಚಿರುತ್ತಾರೆ"** ಈ ಬಗ್ಗೆ ತಮ್ಮ ಗಮನ ಸೆಳೆಯಲಾಗಿದೆ.

2018-19ರಲ್ಲಿ ಆಯುಕ್ತರಿಂದ ಅನುಮೋದನೆಯಾಗಿ ಸ್ಯಾಂಕ್ಷನ್ ಆರ್ಡರ್ ಜನರೇಟ್ ಆದ ಶಾಲೆಗಳಿಗೆ ಕೂಡಲೇ ನಿಮ್ಮ ಆರ್.ಟಿ.ಇ. ಖಾತೆಯಲ್ಲಿರುವ ಅನುದಾನದಲ್ಲಿ ಬಿಲ್ಲು ಜನರೇಟ್ ಮಾಡಿ ಬಿಡುಗಡೆ ಮಾಡಲು ತುರ್ತು ಕ್ರಮವಹಿಸಲು ತಿಳಿಸಿದೆ.

ನಿರ್ದೇಶಕರು [ಪ್ರಾಥಮಿಕ ಶಿಕ್ಷಣ]

**ಗೆ,**

ಜಿಲ್ಲಾ ಉಪನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ,